# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 15/2022

ಪಿಡಬ್ಲ್ಯೂ: 08
ಸಿಡಬ್ಲ್ಯೂ: 08

**<u>ದಿನಾಂಕಃ 10-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಸಾಕ್ಷಿದಾರರ ಹೆಸರು | ಃ ಶ್ರೀಶೈಲಪ್ಪ |
| ತಂದೆಯ ಹೆಸರು | ಃ ಟಿ. ತಿಮ್ಮಯ್ಯ |
| ವಯಸ್ಸು | ಃ 63 ವರ್ಷ |
| ಉದ್ಯೋಗ | ಃ ನಿವೃತ್ತ ಎ.ಎಸ್.ಐ. |
| ವಾಸ ಸ್ಥಳ | ಃ ತಡಕನೂರು, ಶಿರಾ ತಾಲ್ಲೂಕು |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ</u>**

**2018** ರಿಂದ **2021** ರವರೆಗೆ ನಾನು ಎ.ಎಸ್.ಐ. ಎಂದು ಐಮಂಗಲ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸಿದ್ದೇನೆ. ದಿನಾಂಕ **23–08–2019** ರಂದು ಸಂಜೆ **6.30** ಗಂಟೆಗೆ ಪಿರ್ಯಾದಿ ತಿಮ್ಮಯ್ಯ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ನಿಪಿ–**1** ರಂತೆ ಸ್ವೀಕರಿಸಿ ಅದನ್ನು ನಮ್ಮ ಠಾಣಾ ಸಿಆರ್ ನಂ.**128/2019** ಕ್ಕೆ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿ ಕಳುಹಿಸಿಕೊಟ್ಟೆ. ಸದರಿ ಪ್ರಥಮ ವರ್ತಮಾನ ವರದಿ ನೋಡುತ್ತಿದ್ದು ಅದನ್ನು ನಿಪಿ–**6** ಎಂದು ಗುರುತಿಸಲಾಯಿತು. ದಿನಾಂಕ **24–08–2019** ರಂದು ಕೃತ್ಯ ನಡೆದ ಸ್ಥಳಕ್ಕೆ ಹೋಗಿದ್ದು ಅಲ್ಲಿ ಪಂಚರ ಸಮಕ್ಷಮ ಅಂದರೆ ಕದುರಪ್ಪ ಹಾಗೂ ಸಂಜೀವಪ್ಪ ಇವರ ಸಮಕ್ಷಮ ಕೃತ್ಯಕ್ಕೆ ಉಪಯೋಗಿಸಿದ ಕಬ್ಬಿಣದ ರಾಡು ಹಾಗೂ ಒಂದು ಕುಡುಗೋಲನ್ನು ಅಮಾನತ್ತುಪಡಿಸಿಕೊಂಡೆ. ಆಗ ಮಾಡಲಾದ ಮಹಜರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–**3** ಎಂದು ಗುರುತಿಸಲಾಗಿದೆ. ಕುಡುಗೋಲನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು **1** ಎಂದು ಗುರುತಿಸಲಾಗಿದ್ದು, ರಾಡನ್ನು ಮುದ್ದೆ ಮಾಲು **2** ಎಂದು ಈಗಾಗಲೇ ಗುರುತಿಸಲಾಗಿದೆ. ನಾನು ಪುನಃ ಹೇಳುತ್ತೇನೆ ಮುದ್ದೆ ಮಾಲು **1** ಹಾಗೂ **2** ಅಲ್ಲದೇ ಎರಡು ಅಡಿ ಉದ್ದದ ಕಾವು ಇದ್ದ ಕೊಡಲಿಯನ್ನು ಕೂಡಾ ಅವಾನತ್ತುಪಡಿಸಿಕೊಂಡೆ. ಅದನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು **3** ಎಂದು ಗುರುತಿಸಲಾಗಿದೆ. ಅಲ್ಲದೇ ಅದೇ ದಿನ ಸಾಕ್ಷಿದಾರರಾದ ರಘು, ನೇತ್ರಾವತಿ ಹಾಗೂ ರಮೇಶ್ ಇವರ ಹೇಳಿಕೆಗಳನ್ನು ಮಾಡಿಕೊಂಡೆ. ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲುಗಳ ಕುರಿತು ಪಿಎಫ್ ನಂ.**107/19** ರಲ್ಲಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದೆ.

**2.** ದಿನಾಂಕ **26–09–2019** ರಂದು ಈ ಕೇಸಿನ ಆರೋಪಿತರಾದ ಸಣ್ಣೀರಪ್ಪ, ಮಹಾಂತೇಶ್, ಮಂಜುಳ, ನಾಗರತ್ನಮ್ಮ, ಜಯ್ಯಪ್ಪ ಹಾಗೂ ಬಸವರಾಜ್ ಇವರುಗಳು ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಮೀನು ಪಡೆದು ಹಾಜರಾಗಿದ್ದು ಅವರನ್ನು ದಸ್ತಗಿರಿ ಮಾಡಿ ಅಗತ್ಯ ನಿಯಮಗಳನ್ನು ಕೈಗೊಂಡೆ. ದಿನಾಂಕ **02–11–2019** ರಂದು ಐಮಂಗಲ ಠಾಣೆಯ

ಮುಖ್ಯ ಪೇದೆ ರಮೇಶ್ ಎಂಬುವರು ಹಿರಿಯೂರು ಸರ್ಕಾರಿ ಆಸ್ಪತ್ರೆಯಿಂದ ಗಾಯದ ಪ್ರಮಾಣಪತ್ರಗಳನ್ನು ನಿಪಿ–**4** ಹಾಗೂ **5** ರಂತೆ ತಂದು ಹಾಜರುಪಡಿಸಿದ್ದು ಅವುಗಳನ್ನು ಸ್ವೀಕರಿಸಿ ತನಿಖೆಯಲ್ಲಿ ಅಳವಡಿಸಿಕೊಂಡೆ. ದಿನಾಂಕ **21–12–2019** ರಂದು ಪಿರ್ಯಾದಿಯ ಮರು ಹೇಳಿಕೆ ಮಾಡಿಕೊಂಡೆ. ದಿನಾಂಕ **11–02–2020** ರಂದು ಆರೋಪಿಯಾದ ಯಲ್ಲಪ್ಪ ಬಿನ್ ತಿಮ್ಮಣ್ಣ ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಹಾಜರಾಗಿದ್ದು ಆ ಕುರಿತು ಅಗತ್ಯ ಕ್ರಮಗಳನ್ನು ಕೈಗೊಂಡೆ. ತನಿಖಾ ಕಾಲದಲ್ಲಿ ಪಿರ್ಯಾದಿಯ ಜಮೀನಿನ ಆರ್.ಟಿ.ಸಿ.ಯನ್ನು ಪಡೆದುಕೊಂಡಿದ್ದು ಅದನ್ನು ನೋಡುತ್ತಿದ್ದು ಅದನ್ನು ನಿಪಿ–7 ಎಂದು ಗುರುತಿಸಲಾಯಿತು. ತನಿಖೆ ಮುಕ್ತಾಯವಾಗಿದ್ದರಿಂದ ಆರೋಪಿತರ ವಿರುದ್ಧ ದೋಷರೋಪಣ ಪತ್ರವನ್ನು ಸಲ್ಲಿಸಿದೆ. ನ್ಯಾಯಾಲಯದಲ್ಲಿರುವ ಆರೋಪಿತರನ್ನು ಗುರುತಿಸುತ್ತೇನೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಪಿ.ಎಂ.ಹೆಚ್. ವಕೀಲರಿಂದಃ**

**3.** ಈ ಪ್ರಕರಣದ **2** ನೇ ಆರೋಪಿ ದಿನಾಂಕ **23–08–2019** ರಂದು ಮದ್ಯಾಹ್ನ **2.45** ಗಂಟೆಗೆ ನಮ್ಮ ಠಾಣೆಗೆ ಹಾಜರಾಗಿ ನಮ್ಮ ಠಾಣಾ ಸಿಆರ್ ನಂ.**127/19** ರಲ್ಲಿ ಪಿರ್ಯಾದುದಾರ ಹಾಗೂ ಇತರರ ವಿರುದ್ಧ ದೂರನ್ನು ದಾಖಲಿಸಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಸ್ಥಳ ಪರಿಶೀಲನಾ ಕಾಲಕ್ಕೆ ನೆಲದ ಮೇಲೆ ರಕ್ತ ಬಿದ್ದಿತ್ತು. ಆದರೆ ಆ ರಕ್ತ ಮಿಶ್ರಿತ ಮಣ್ಣನ್ನು ನಾನೇನು ಅಮಾನತ್ತುಪಡಿಸಿಕೊಂಡಿಲ್ಲ. ಮಹಜರಿನಲ್ಲಿ ಅಲ್ಲಿ ನೆಲದ ಮೇಲೆ ರಕ್ತ ಬಿದ್ದ ಬಗ್ಗೆ ನಾನು ಎಲ್ಲೂ ನಮೂದಿಸಿಲ್ಲ ಎನ್ನುವುದು ನಿಜ. ಅಲ್ಲದೇ ಆ ಸ್ಥಳದಲ್ಲಿ ಕಾರದಪುಡಿ ಬಿದ್ದ ಬಗ್ಗೆ ಕೂಡಾ ನಾನು ನಮೂದಿಸಿಲ್ಲ ಎನ್ನುವುದು ನಿಜ. ಮುದ್ದೆ ಮಾಲು **1** ರಿಂದ **3** ಇವುಗಳಿಗೆ ರಕ್ತ ತಗುಲಿದ ಬಗ್ಗೆ ಕೂಡಾ ನಾನು ಮಹಜರಿನಲ್ಲಿ ಹೇಳಿಲ್ಲ ಎನ್ನುವುದು ನಿಜ. ನನ್ನ ಮುಂದೆ ಪ್ರಾಸಾ–**3 1** ನೇ ಆರೋಪಿ / ಸಣ್ಣೀರಪ್ಪ ಆತನಿಗೆ ಕೊಡಲಿಯಿಂದ ತಲೆಗೆ ಹಲ್ಲೆ ಮಾಡಿದ ಬಗ್ಗೆ ಹೇಳಿಲ್ಲ. **2** ನೇ ಆರೋಪಿ / ಮಹಾಂತೇಶ್ ಮಚ್ಚಿನಿಂದ ಆತನ ಬಿನ್ನಿಗೆ ಹೊಡೆದ ಬಗ್ಗೆ ಹೇಳಿಲ್ಲವೆನ್ನುವುದು ನಿಜ. ಸದರಿ ಸಣ್ಣೀರಪ್ಪ ತನ್ನ ತಂದೆಗೆ ಹೊಡೆದ ಬಗ್ಗೆ ಕೂಡಾ ಪ್ರಾಸಾ–**3** ನನ್ನ ಮುಂದೆ ಹೇಳಿಲ್ಲ ಎನ್ನುವುದು ನಿಜ.

**4.** ದಿನಾಂಕ **24–08–2019** ರಂದು ನಾನು ಸ್ಥಳ ಪರಿಶೀಲನೆ ಮಾಡಿ ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಮುದ್ದೆ ಮಾಲು **1** ರಿಂದ **3** ಇವುಗಳನ್ನು ಅಮಾನತ್ತುಪಡಿಸಿಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಮುದ್ದೆ ಮಾಲುಗಳು ಆ ಸ್ಥಳದಲ್ಲಿಯೇ ಇದ್ದವು. ಅಲ್ಲದೇ ಸಾಕ್ಷಿದಾರರಾದ ರಮೇಶ, ರಘು ಮತ್ತು ನೇತ್ರಾವತಿ ನನ್ನ ಮುಂದೆ ಹೇಳಿಕೆಗಳನ್ನು ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ–7 ರಲ್ಲಿ ಕಾಲಂ ನಂ.**9** ರಲ್ಲಿ ಪಿರ್ಯಾದುದಾರನ ಹೆಸರು ಇಲ್ಲ, ಸರ್ಕಾರ ಎಂದು

ತೋರಿಸಲಾಗಿದೆ ಎನ್ನುವುದು ನಿಜ. ಪಿರ್ಯಾದುದಾರನೊಂದಿಗೆ ಷರೀಕಾಗಿ ನಾನು ದಿನಾಂಕ **23–08–2019** ರಂದು ಸುಳ್ಳು ದೂರನ್ನು ದಾಖಲಿಸಿದ್ದೇನೆ ಎನ್ನುವುದು ಸರಿಯಲ್ಲ. ಆಗಲೇ ಪಿರ್ಯಾದಾರ ಹಾಗೂ ಇತರರ ವಿರುದ್ಧ ದೂರು ದಾಖಲಾಗಿದ್ದರಿಂದ ಅವರೊಂದಿಗೆ ಶಾಮೀಲಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.